## ಮನಸೆಳೆಯುವ ನಂದಗೋಕುಲ

ಕಲರ್ಸ್ ಕನ್ನಡದ 'ನಂದಗೋಕುಲ' ಮನಸೆಳೆಯುವಂತೆ ಇದೆ. ಕೂಡು ಕುಟುಂಬದ ಪ್ರಾಮುಖ್ಯತೆ ಸಾರುತ್ತಾ, ಬದುಕಿಗೆ ಹತ್ತಿರವಾಗಿದೆ. ತಂದೆ, ತಾಯಿ, ಮಕ್ಕಳ ನಡುವೆ ಇರಬೇಕಾದ ಸಾಮರಸ್ಯ ಮಹತ್ವವನ್ನು ತಿಳಿಸುತ್ತದೆ. ಇಲ್ಲಿ ಯಾರೂ ವಿಲನ್‌ಗಳಿಲ್ಲ. ಇಲ್ಲಿನ ಪಾತ್ರಗಳಿಗೆ ರೌಡಿಗಳು, ಸುಪಾರಿ ಕಿಲ್ಲರ್ಸ್ ಪರಿಚಯವಿಲ್ಲ. ಗಿರಿಜಾಳ ಎರಡನೇ ಅತ್ತಿಗೆಯ ಸ್ವಭಾವ ಅತಿರೇಕವಲ್ಲ. ಹಲವಾರು ಹೆಣ್ಣು ಮಕ್ಕಳಲ್ಲಿ ಈ ಸ್ವಭಾವ ಕಾಣುತ್ತೇವೆ. ಪ್ರತಿಯೊಬ್ಬರ ಅಭಿನಯವೂ ಚೆನ್ನಾಗಿದೆ.

—ಮುಕ್ತಾ ಸಿ.ಎನ್.

## ಕಾನೂನು ಉಲ್ಲಂಘಿಸಲು ಪ್ರೇರಣೆಯೇ?

ಕಲರ್ಸ್ ಕನ್ನಡದ 'ಭಾಗ್ಯಲಕ್ಷ್ಮೀ'ಯಲ್ಲಿ ತಾಂಡವ್ ತನ್ನ ಸ್ನೇಹಿತ ಆದಿ ಹೇಳಿದಂತೆ ಭಾಗ್ಯನ ಮನೆ ಹತ್ತಿರ ಹೊರಡುತ್ತಾನೆ. ಅದೇ ಆಫೀಸಿನ ನೌಕರನೊಬ್ಬ ತಾಂಡವ್ ಎಲ್ಲಿಗೆ ಹೋಗುತ್ತಿದ್ದಾನೆ ಎಂದು ತಿಳಿದು ಕನ್ನಿಕಾಗೆ ತಿಳಿಸುವ ಸಂಬಂಧ ಅವನನ್ನು ಹಿಂಬಾಲಿಸಿಕೊಂಡು ಹೋಗುತ್ತಾನೆ. ಅದೇ ಸಮಯಕ್ಕೆ ಕನ್ನಿಕಾಳಿಂದ ಅವನಿಗೆ ಕರೆ ಬರುತ್ತದೆ. ಆಗ ಅವನು ಓಡಿಸುತ್ತಿದ್ದ ದ್ವಿಚಕ್ರ ವಾಹನವನ್ನು ದಾರಿಯ ಮಧ್ಯದಲ್ಲಿ ನಿಲ್ಲಿಸಿ ಕರೆ ಸ್ವೀಕರಿಸುತ್ತಾನೆ. ನಂತರ ಮಾತನಾಡುತ್ತಲೇ ವಾಹನ ಚಲಾಯಿಸುತ್ತಾನೆ. ತಾಂಡವ್ ಕೂಡ ಕಾರನ್ನು ಓಡಿಸಿಕೊಂಡು ಆದಿಯ ಹಾಗೂ ಶ್ರೇಷ್ಠಳ ಕರೆ ಸ್ವೀಕರಿಸಿ ಮಾತನಾಡಲು ತೊಡಗುತ್ತಾನೆ. ವಾಹನ ಚಾಲನೆಯಲ್ಲಿರುವಾಗ ಮೊಬೈಲ್‌ನಲ್ಲಿ ಮಾತನಾಡಬಾರದು ಎಂಬ ಕಾನೂನಿನ ಉಲ್ಲಂಘನೆ ಆಗುವುದಿಲ್ಲವೇ?

—ಎಸ್.ವಿ. ಗೋಪಾಲ್ ರಾವ್, ಬೆಂಗಳೂರು

## ನ್ಯಾಯದ ತೀರ್ಪು ಪಾಠವಾಗಲಿ

ಝೀ ಕನ್ನಡದ 'ಲಕ್ಷ್ಮೀನಿವಾಸ'ದಲ್ಲಿ ಶ್ರೀನಿವಾಸರ ನಡೆ ಮೆಚ್ಚುವಂತಿದೆ. ಮುಪ್ಪಿನ ಕಾಲದಲ್ಲಿ ತಂದೆ ತಾಯಿಯರನ್ನು ದೂರ ಮಾಡಿದ ಮಕ್ಕಳು ಮತ್ತು ಹಿಂಸೆ ಕೊಡುವ ಮಕ್ಕಳನ್ನು ಸಾಕಷ್ಟು ನೋಡಿದ್ದೇವೆ. ಮಕ್ಕಳ ಮೇಲಿನ ವ್ಯಾಮೋಹದಿಂದ ಪಾಲಕರು ಎಲ್ಲ ತೊಂದರೆಗಳನ್ನು ಸಹಿಸಿಕೊಳ್ಳುತ್ತಾರೆ. ಹಾಗೆ ಶ್ರೀನಿವಾಸರು ಸಹಿಸಿಕೊಂಡು ಕೊನೆಗೆ ಮಕ್ಕಳಿಗೆ ಪಾಠ ಕಲಿಸಲು ಕೋರ್ಟ್ ಮುಖಾಂತರ ತೆಗೆದುಕೊಂಡ ಕ್ರಮ ಇಂದಿನ ಪೀಳಿಗೆಗೆ ಪಾಠವಾಗಲಿ

—ಮಹಾಂತೇಶ ಪಾಟೀಲ, ಹುನಗುಂದ

ವಾರದ ಪತ್ರ

## ಗಾಯಕಿಯ ಅರ್ಥಪೂರ್ಣ ಮಾತು

ಚಂದನದಲ್ಲಿ 'ಜೀವನದ ಬೆಳಕನ್ನು ತಾವೆ ಕಾಣಲು ಬೇಕು' ಎಂದು ಸುಶ್ರಾವ್ಯವಾಗಿ ಹಾಡಿ ಸಂಗೀತಪ್ರಿಯರಿಗೆ ಒಳ್ಳೆಯ ವಿಷಯವನ್ನು ತಿಳಿಸಿದ ಟಿ.ಎಸ್. ಸತ್ಯವತಿಯವರ ಮಾತುಗಳು ತುಂಬಾ ಇಷ್ಟವಾದವು. ಎರಡು ವರ್ಷದ ಮಗುವಾಗಿದ್ದಾಗಲೇ ಮೈಸೂರಿನ ಲಕ್ಷ್ಮೀ ಅಮ್ಮಣ್ಣಿಯವರ ಸಮ್ಮುಖದಲ್ಲಿ ಗಾಯನಕ್ಕಾಗಿ ಪ್ರಶಂಸೆ ಪಡೆದ ಬಾಲ ಪ್ರತಿಭೆ ಅವರು. ಹದಿನಾರನೇ ವಯಸ್ಸಿನಲ್ಲಿ ಸಭಾ ಕಛೇರಿ ನಡೆಸಿ, ಹಲವಾರು ಶಿಷ್ಯರನ್ನು ಸಮಾಜಕ್ಕೆ ಕೊಡುಗೆ ನೀಡಿ, ವಿವಿಧ ರಾಷ್ಟ್ರಗಳ ಹಲವಾರು ವೇದಿಕೆಗಳಲ್ಲಿ ಕರ್ನಾಟಕ ಸಂಗೀತದ ರಸದೌತಣವನ್ನು ಶ್ರೋತೃಗಳಿಗೆ ನೀಡಿರುವ ಸತ್ಯವತಿಯವರ ಸಂದರ್ಶನ ಅರ್ಥಪೂರ್ಣವಾಗಿ ಮೂಡಿಬಂತು.

ವಿಶೇಷ ಕಾರ್ಯಾಗಾರಗಳ ಬಗ್ಗೆ ಮತ್ತು ಅತ್ಯಂತ ಕ್ಲಿಷ್ಟವಾದ 'ರಾಗಮಾಲಿಕಾ ತಾಳವಾದನ'ದ ಬಗ್ಗೆ ತಿಳಿಸಿ ಪ್ರಾತ್ಯಕ್ಷಿಕೆ ತೋರಿಸಿದುದು ನಿಜಕ್ಕೂ ಮೆಚ್ಚಬೇಕು. ಇದರ ಬಗ್ಗೆ ನಮಗೆ ಗೊತ್ತೇ ಇರಲಿಲ್ಲ. ಹೊಸ ವಿಷಯ ತಿಳಿದು ಸಂತೋಷವಾಯಿತು.

—ವೀಣಾ ಶಂಕರ್, ಬೆಂಗಳೂರು

## ಕುತೂಹಲ ಕೆರಳಿಸಿದ ಮನೋಜ್ಞ ಕಥನ

ಕಲರ್ಸ್ ಕನ್ನಡದ 'ನಂದಗೋಕುಲ' ಧಾರಾವಾಹಿ ತುಂಬ ಚೆನ್ನಾಗಿ ಬರುತ್ತಿದೆ. ಮಧ್ಯಮ ವರ್ಗದ ಕಥೆ ಆದ್ದರಿಂದ ಹೆಚ್ಚು ಆಕರ್ಷಕವಾಗಿದೆ. ಊರ ಯಜಮಾನರು ಗಣೇಶೋತ್ಸವ ಕಾರ್ಯಕ್ರಮಕ್ಕೆ ನಂದಕುಮಾರನನ್ನು ಮುಖ್ಯಸ್ಥನನ್ನಾಗಿ ಆಯ್ಕೆ ಮಾಡುತ್ತಾರೆ. ಉತ್ಸವಕ್ಕೆ 10 ಲಕ್ಷ ರೂಪಾಯಿಗಳನ್ನು ಅವನ ಕೈಗೆ ಕೊಡುತ್ತಾರೆ. ಆ ದುಡ್ಡನ್ನು ಮನೆಗೆ ಹೋಗುತ್ತಿರುವಾಗ ದರೋಡೆಕೋರರು ಅಡ್ಡಗಟ್ಟಿ ಲೂಟಿ ಮಾಡುತ್ತಾರೆ. ನಂದ ಗಾಬರಿಯಿಂದ ಮನೆಗೆ ಬರುತ್ತಾನೆ. ಯಾರ ಜೊತೆ ಮಾತನಾಡುವುದಿಲ್ಲ. ಆದರೆ ಅವನ ಕೊನೆಯ ಮಗ ವಲ್ಲಭ ಕಳ್ಳರನ್ನು ಪತ್ತೆ ಹಚ್ಚಿ ಅವರನ್ನು ಪಂಚರ ಮುಂದೆ ತಂದು ನಿಲ್ಲಿಸುತ್ತಾನೆ. ಮಾತ್ರವಲ್ಲದೆ ತನ್ನ ತಂದೆ ಮೇಲೆ ಬರಬಹುದಾದ ಕಳಂಕವನ್ನು ದೂರಮಾಡುವ ಈ ಸನ್ನಿವೇಶ ತುಂಬ ಚೆನ್ನಾಗಿ ಮೂಡಿಬಂದಿದೆ. ಇಂತಹ ಕಥೆ ಹೆಚ್ಚಾಗಲಿ.

—ಆರ್.ಎಸ್.ಎಂ. ರಾವ್, ಬೆಂಗಳೂರು

## ಹತ್ಯೆ ಹುಡುಗಾಟದ ಕೆಲಸವೇ?

ಕಲರ್ಸ್ ಕನ್ನಡದ 'ರಾಮಾಚಾರಿ'ಯಲ್ಲಿ ಕಥಾಸಾರ ಉಳಿದಿಲ್ಲ. ಹಿಂಡಿ ರಸ ತೆಗೆದ ಕಬ್ಬಿನ ಸ್ಥಿತಿ ಅದಕ್ಕೆ ಬಂದಿದ್ದರೂ ಮತ್ತೆ ಅದಕ್ಕೆ ಬೇರೆ ಬೇರೆ ವಿಷಯವನ್ನು ಸೇರಿಸುತ್ತಿದೆ. ಇದನ್ನು ನೋಡಲು ತುಂಬ ಕಸಿವಿಸಿ ಆಗುತ್ತದೆ. ಮಾನ್ಯತಾ ಪಾತ್ರವನ್ನು ಅತ್ಯಂತ ಕ್ರೂರವಾಗಿ ಚಿತ್ರಿಸಿದ್ದಾರೆ. ಮಗಳನ್ನೇ ಹತ್ಯೆ ಮಾಡುವ ಯತ್ನ ನೋಡುವುದಕ್ಕೇ ಬೇಸರ ಅನ್ನಿಸುತ್ತದೆ. ತಾಯಿಯಾದವಳನ್ನು ಈ ರೀತಿ ಬಿಂಬಿಸುವುದು ಯಾವ ನೀತಿಯನ್ನು ಪ್ರಸಾರ ಮಾಡಲು ಎಂದು ನಿರ್ದೇಶಕರು ಹೇಳಬೇಕಿದೆ.

—ವಾಸುದೇವ, ಹಾಸನ

## ಶಿಕ್ಷಣದ ಪ್ರಾಮುಖ್ಯ

ಚಂದನ ವಾಹಿನಿಯ 'ಥಟ್ ಅಂತ ಹೇಳಿ' ಕಾರ್ಯಕ್ರಮದಲ್ಲಿ ಶಿಕ್ಷಕರ ದಿನಾಚರಣೆ ವಿಶೇಷವಾಗಿ ಮೂಡಿಬಂತು. ಶಿಕ್ಷಣದ ವ್ಯವಸ್ಥೆ ಬಗ್ಗೆ ಶಿಕ್ಷಕರು ಮನ ಮುಟ್ಟುವಂತೆ ಮಾತನಾಡಿದರು. ನಿರೂಪಕ ನಾ. ಸೋಮೇಶ್ವರ ಅಧ್ಯಾಪಕ ಶಿಕ್ಷಕ ವೃತ್ತಿ ಹಾಗೂ ಶಿಕ್ಷಣ ಸಂಬಂಧಿ ಪ್ರಶ್ನೆಗಳನ್ನು ಕೇಳಿದರು. ಸರಿ ಉತ್ತರ ನೀಡಿದವರಿಗೆ ಪುಸ್ತಕ ಬಹುಮಾನವನ್ನು ಎಂದಿನಂತೆ ನೀಡಿದ್ದರೂ ಶಿಕ್ಷಕರ ದಿನದಂದು ವಿಶೇಷವಾಗಿತ್ತು.

—ಭಾರತೀ ಗಂಗಾಧರ್, ಬೆಂಗಳೂರು

## ಅಂತರಿಕ್ಷದಲ್ಲಿ ತೇಲಾಡಿಸಿದ ಸಂದರ್ಶನ

ರಾಷ್ಟ್ರೀಯ ಅಂತರಿಕ್ಷ ದಿನದ ಅಂಗವಾಗಿ ಚಂದನ ರೂಪಿಸಿದ 'ಥಟ್ ಅಂತ ಹೇಳಿ' ಕಾರ್ಯಕ್ರಮ ಅತ್ಯಂತ ಮಹತ್ವಪೂರ್ಣವಾಗಿತ್ತು. ಬೆಂಗಳೂರಿನ ನೆಹರೂ ತಾರಾಲಯದ ನಿವೃತ್ತ ನಿರ್ದೇಶಕ ಬಿ.ಆರ್. ಗುರುಪ್ರಸಾದ್ ಮತ್ತು ಬಿ.ಎಸ್. ಶೈಲಜಾ ಅವರ ಸಂದರ್ಶನ ಅಪೂರ್ವವಾಗಿತ್ತು.

—ಕೆ.ಎನ್. ಪ್ರಭಾಕರ ಗುಪ್ತ

## ವರ್ಣ ಭೇದ ಸಲ್ಲ

ಅದೊಂದು ಡಾರ್ಕ್ ಚಾಕೊಲೇಟ್ ಬಿಸ್ಕತ್ ಜಾಹೀರಾತು. ಅದರಲ್ಲಿ ಆ ಬಿಸ್ಕತ್ ರುಚಿಯನ್ನು ವಿವರಿಸುತ್ತ ಮಧ್ಯದಲ್ಲಿ ಕಪ್ಪು ವರ್ಣದವರನ್ನು ಸೇರಿಸುತ್ತಾರೆ. ಇಲ್ಲೂ ವರ್ಣಭೇದ ನೀತಿಯೇ ಎಂದು ಅನ್ನಿಸಿಬಿಡುತ್ತದೆ. ವ್ಯಾಪಾರದ ಮೇಲಾಟದಲ್ಲಿ ಈ ರೀತಿಯಲ್ಲಿ ಒಂದು ಜನಾಂಗವನ್ನು ತೋರಿಸುವುದು ಸರಿಯಲ್ಲ. ಇಂತಹದಕ್ಕೆಲ್ಲ ಏಕೆ ಕಡಿವಾಣ ಇರುವುದಿಲ್ಲ?

—ಕೆ.ಎಸ್. ಸೋಮೇಶ್ವರ

## ಖಳ ನಾಯಕಿಯರ ಪ್ರೇಮ

ಬಹುತೇಕ ಖಳನಾಯಕಿಯರು ಮದುವೆ ಆದ ಪುರುಷನ ಹಿಂದೆ ಬೀಳುವುದು ಕಾಯಂ ಆಗಿದೆ. 'ಭಾಗ್ಯಲಕ್ಷ್ಮೀ' ಮತ್ತು 'ರಾಮಾಚಾರಿ', 'ಶ್ರಾವಣಿ ಸುಬ್ರಹ್ಮಣ್ಯ'ದಲ್ಲಿ ಖಳ ನಾಯಕಿಯರ ತಂತ್ರ ಕುತಂತ್ರ ಮಿತಿ ಮೀರಿದೆ. 'ಪುಟ್ಟಕ್ಕನ ಮಕ್ಕಳ' ಹಣೆ ಬರಹವೂ ಅಷ್ಟೇ. 'ಲಕ್ಷ್ಮೀ ನಿವಾಸ'ದಲ್ಲಿ ಅಳಿಯ ಮತ್ತು ಗಂಡು ಮಕ್ಕಳೇ ಖಳ ನಾಯಕರ ಪಾತ್ರ ಪೋಷಣೆ ಚೆನ್ನಾಗಿದೆ. 'ಶ್ರೀರಸ್ತು ಶುಭಮಸ್ತು' ಉತ್ತಮ ಅನಿಸುತಿತ್ತು, ಅಷ್ಟರಲ್ಲಿ ಶುಭಂ ಹೇಳಿಯೇ ಬಿಟ್ಟರು.

—ಆರ್. ವೀರೇಶ್ ಕುಮಾರ್, ಬೆಂಗಳೂರು